# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು–572 103

ಸಂಖ್ಯೆ: ತುವಿ: ಡಿಇವಿ–02:2023–24/4427 ದಿನಾಂಕ:17.02.2024

## ಕಚೇರಿ ಆದೇಶ

ವಿಷಯ: ಸಂವಿಧಾನ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಕುರಿತು.

ಉಲ್ಲೇಖ: 1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು, ಇವರ ಪತ್ರ ಸಂಖ್ಯೆ:ಅ.ಸ.ಪ ಸಂಖ್ಯೆ:ಅಮುಕಾ ಅಆ:49:2024 ದಿನಾಂಕ:15.02.2024

2 ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:16.02.2024

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತ ಸಂವಿಧಾನವನ್ನು ಅಂಗೀಕರಿಸಿಕೊಂಡು 75ನೇ ವರ್ಷದ ಆಚರಣೆಯ ಪ್ರಯುಕ್ತ **"ಸಂವಿಧಾನ ಜಾಗೃತಿ ಜಾಥ"** ದೊಂದಿಗೆ **"ಸಂವಿಧಾನ ಮತ್ತು ಭಾರತದ ಐಕ್ಯತ ಸಮಾವೇಶ"** ಶೀರ್ಷಿಕೆಯಡಿಯಲ್ಲಿ ರಾಷ್ಟ್ರೀಯ ಮಟ್ಟದ ಸಮ್ಮೇಳನ ಮತ್ತು ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಅದರಂತೆ ಏಕಕಾಲದಲ್ಲಿ ಅದೇ ರೀತಿ ದಿನಾಂಕ:24 ಮತ್ತು 25ನೇ ಫೆಬ್ರವರಿ 2024 ರಂದು ಸಂವಿಧಾನ ಮತ್ತು ಭಾರತದ ಏಕತಾ ಬೃಹತ್ ಸಮಾವೇಶವನ್ನು ಬೆಂಗಳೂರಿನ ಅರಮನೆ ಮೈದಾನದಲ್ಲಿ ಆಯೋಜಿಸಲಾಗುತ್ತಿದೆ. ಈ ಹಿನ್ನೆಲೆಯಲ್ಲಿ **"ಭಾರತ ಸಂವಿಧಾನ ಉದಾತ್ತವಾದ ಆದರ್ಶ ಮತ್ತು ಮೌಲ್ಯಗಳನ್ನು"** ಸಾರ್ವಜನಿಕವಾಗಿ ತಿಳುವಳಿಕೆ ಮೂಡಿಸುವ ಉದ್ದೇಶದಿಂದ ಈ ಕೆಳಕಂಡ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲು ತಿಳಿಸಿರುತ್ತಾರೆ.

ಜಾಗೃತಿ ಕಾರ್ಯಕ್ರಮಗಳು:

ಅ) ಸಂವಿಧಾನ ಜಾಗೃತಿ ಜಾಥಾ (2024ರ ಜನವರಿ 26 ರಿಂದ ಫೆಬ್ರವರಿ 23 ರವರೆಗೆ)
ಆ) ಸಂವಿಧಾನ ಕುರಿತ ಸಂವಾದ (ಫೆಬ್ರವರಿ 24 ಮತ್ತು 25 ರಂದು)
ಇ) ಸಂವಿಧಾನ ಜಾಗೃತಿ ಸಮಾವೇಶ (ಫೆಬ್ರವರಿ 24 ಮತ್ತು 25 ರಂದು)

ಮುಂದುವರೆದು, ಪತ್ರದೊಂದಿಗೆ ನೀಡಿರುವ https://www.youtube.com/@SWDGoK ಯೂಟ್ಯೂಬ್ ಮೂಲಕ ಕಾರ್ಯಕ್ರಮದ ನಿರಂತರ ಪ್ರಸಾರ (Live stream) ವೀಕ್ಷಿಸಬಹುದೆಂದು ಅಲ್ಲದೆ https://constitutionofindia-karnataka.in/ ಮೂಲಕ ಸಂವಾದ ಸಮಾವೇಶದಲ್ಲಿ ಭಾಗವಹಿಸಲು ಇಚ್ಚಿಸುವ ವಿದ್ಯಾರ್ಥಿಗಳು ಹಾಗೂ ಸಂಶೋಧಕರು ಆನ್‌ಲೈನ್ ಮುಖಾಂತರ ನೋಂದಾಯಿಸಿಕೊಳ್ಳಬಹುದಾಗಿದೆ ಎಂದು ತಿಳಿಸಿರುತ್ತಾರೆ.

ಈ ಸಂಬಂಧ ಉಲ್ಲೇಖಿತ ಪತ್ರವನ್ನು ಲಗತ್ತಿಸಿದ್ದು, ಮೇಲ್ಕಂಡ ಕಾರ್ಯಕ್ರಮಗಳನ್ನು ಆಯೋಜಿಸುವ ಸಂಬಂಧ ಸೂಕ್ತ ಕ್ರಮವಹಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

17/2/24

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

ಸಂಯೋಜನಾಧಿಕಾರಿಗಳು, ಎನ್.ಎಸ್.ಎಸ್ ಘಟಕ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.